ಕನ್ನಡಪ್ರಭ

# ಅಂತರ ವಿವಿ ಈಜು: ಅವಿನಾಶ್‌ಗೆ ಬೆಳ್ಳಿ

**ಬೆಂಗಳೂರು:** ಇಲ್ಲಿನ ಕನಕಪುರ ರೆಸಿಡೆನ್ಸಿ ಶಾಲೆಯ ಈಜುಕೊಳದಲ್ಲಿ ನಡೆಯುತ್ತಿರುವ ಆಲ್ ಇಂಡಿಯಾ ಅಂತರ ವಿಶ್ವ ವಿದ್ಯಾಲಯ ಈಜು ಚಾಂಪಿಯನ್‌ಶಿಪ್‌ನ 2ನೇ ದಿನವಾದ ಸೋಮವಾರ ಪುರುಷರ 4/100 ಮೀ. ರಿಲೇಯಲ್ಲಿ ರಕ್ಷಿತ್, ಚಂದ್ರು, ಪೃಥ್ವಿಕ್, ಲಿಖಿತ್ ಅವರನ್ನೊಳಗೊಂಡ ಜೈನ್ ವಿವಿ ತಂಡ 3:38.62 ಸೆ.ಗಳಲ್ಲಿ ಗುರಿ ತಲುಪಿ ರಾಷ್ಟ್ರೀಯ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದಿತು. 400 ಮೆಡ್ಲೆಯಲ್ಲಿ ಜೈನ್ ವಿವಿಯ ಶಿವಾ 4:48.57 ಸೆ.ಗಳಲ್ಲಿ ಗುರಿ ತಲುಪಿ ಕಂಚು ಗೆದ್ದರು. 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಶಿವಾ 2:11.35 ಸೆ.ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆದ್ದರು. 200 ಮೀ. ಫ್ರೀಸ್ಟೈಲ್‌ನಲ್ಲಿ ಅವಿನಾಶ್ 1:58.17 ಸೆ.ಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು. ಜೈನ್ ವಿವಿಯ ರಾಹುಲ್ 1:59.60 ಸೆ.ಗಳಲ್ಲಿ ಗುರಿ ತಲುಪಿ ಕಂಚು ಜಯಿಸಿದರು.